8) ಪ್ರಾಯೋಗಿಕ ಪರೀಕ್ಷೆ ನಡೆಸಲು ಮುಂಗಡ ಹಣವನ್ನು ಸಂಬಂಧಿಸಿದ ಡಿ.ಪಿ.ಇಡಿ ಸಂಸ್ಥೆಯ ಪ್ರಾಂಶುಪಾಲರಿಗೆ(ಆಂತರಿಕ ಪರೀಕ್ಷಕರಿಗೆ) ನೀಡಲಾಗಿದೆ. ಪ್ರಾಂಶುಪಾಲರು ಈ ಮುಂಗಡದಲ್ಲಿ ಕೆಳಕಂಡ ದರಗಳಲ್ಲಿ ಬಾಹ್ಯ ಪರೀಕ್ಷಕರ ಬಿಲ್ಲಿನ ಮೊತ್ತವನ್ನು ಪಾವತಿಸಿ ವ್ಯತ್ಯಾಸದ ಮೊಬಲಗಿಗೆ ಅಂತಿಮ ಸಂಭಾವನೆ ಬಿಲ್ಲನ್ನು ಮಂಡಳಿಯ ಲೆಕ್ಕಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಯಾವುದಾದರು ಸಂಸ್ಥೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಒಂದಕ್ಕಿಂತ ಹೆಚ್ಚು ಬೋರ್ಡ್ ಮಾಡಿಕೊಂಡಲ್ಲಿ ನೀವು ಪಾಠ ವೀಕ್ಷಣೆ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಸಂಸ್ಥೆಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ತಾಳೆ ಹೊಂದುವಂತೆ ಆಂತರಿಕ ಮತ್ತು ಬಾಹ್ಯ ಪರೀಕ್ಷಕರು ಎಚ್ಚರ ವಹಿಸತಕ್ಕದ್ದು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪರೀಕ್ಷೆಗೆ ಅಗತ್ಯವಿದ್ದಷ್ಟು ದಿನಗಳನ್ನು ಮಾತ್ರ ಬಳಸಿಕೊಳ್ಳತಕ್ಕದ್ದು. ಅಗತ್ಯಕ್ಕಿಂತ ಹೆಚ್ಚಿನ ದಿನಗಳಿಗೆ ಬಿಲ್ಲನ್ನು ಸಲ್ಲಿಸಿದಲ್ಲಿ ಆ ಮೊಬಲಗನ್ನು ಕಡತಗೊಳಿಸಲಾಗುವುದು. ಹಿಂದಿನ ಸಾಲುಗಳ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಅನಾವಶ್ಯಕವಾಗಿ ದಿನಭತ್ಯೆಯನ್ನು ಹೆಚ್ಚಿಗೆ ಕೋರಿರುವುದು ಕಂಡು ಬರುತ್ತದೆ. ಆದ್ದರಿಂದ ಒಂದು ಬೋರ್ಡಿಗೆ ಒಂದು ದಿನಕ್ಕೆ ಕನಿಷ್ಠ 6 ಪಾಠಗಳನ್ನು ಕಡ್ಡಾಯವಾಗಿ ವೀಕ್ಷಣೆ ಮಾಡತಕ್ಕದ್ದು ಮತ್ತು ಮೈದಾನದಲ್ಲಿ(ಹೊರಾಂಗಣ ಕ್ರೀಡಾ ಚಟುವಟಿಕೆಗಳು) ಕನಿಷ್ಠ 15 ವಿದ್ಯಾರ್ಥಿಗಳ ಪರಿವೀಕ್ಷಣೆ ನಡೆಸತಕ್ಕದ್ದು.

**ಡಿ.ಪಿ.ಇಡಿ ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ಸಂಭಾವನೆ ವಿವರ:**

| ಕ್ರ.ಸಂ | ವಿವರ | ಸಂಭಾವನೆ |
|---|---|---|
| 01 | ಪ್ರಾಯೋಗಿಕ. ಪರೀಕ್ಷೆ ನಡೆಸುವ ಮುಖ್ಯಸ್ಥರ(ಬಾಹ್ಯ ಪರೀಕ್ಷಕರು)ಸಂಭಾವನೆ (ಒಂದು ದಿನಕ್ಕೆ) | ರೂ.65/- |
| ಪಾಠ ವೀಕ್ಷಣೆಗೆ ಸಂಭಾವನೆ | | |
| 01 | ಪ್ರಾಯೋಗಿಕ ಪರೀಕ್ಷೆಯ ಪಾಠ ವೀಕ್ಷಣೆಗೆ ಎರಡು ಪಾಠಗಳಿಗೆ ಸಂಭಾವನೆ(ಒಬ್ಬ ವಿದ್ಯಾರ್ಥಿಗೆ) | ರೂ.9x2=ರೂ.18/- |
| 02 | ಹೊರಾಂಗಣ ಕ್ರೀಡಾ ಚಟುವಟಿಕೆಗಳ ವೀಕ್ಷಣೆಗೆ ಸಂಭಾವನೆ(ಒಬ್ಬ ವಿದ್ಯಾರ್ಥಿಗೆ) | ರೂ.04/- |
| ಒಟ್ಟು ಸಂಭಾವನೆ (ಒಬ್ಬ ವಿದ್ಯಾರ್ಥಿಗೆ) | | ರೂ.22/- |

ಬಾಹ್ಯ ಪರೀಕ್ಷಕರು(1)ರೂ.65/–ಗಳ ಸಂಭಾವನೆ(ಒಂದು ದಿನಕ್ಕೆ), (2) ಸ್ಥಳೀಯರಲ್ಲದೆ ಬೇರೆ ಸ್ಥಳದಿಂದ ಬಂದಿದ್ದಲ್ಲಿ ಕೆ.ಸಿ.ಎಸ್.ಆರ್ ನಿಯಮದಂತೆ ಪ್ರಯಾಣ ಭತ್ಯೆ (ಕೆ.ಎಸ್.ಆರ್.ಟಿ.ಸಿ ಬಸ್ ಟಿಕೆಟ್ ಲಗತ್ತಿಸಬೇಕು) (3) ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪಾಠವೀಕ್ಷಣೆ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳ ವೀಕ್ಷಣೆಯ ಸಂಭಾವನೆಗೆ ಪ್ರತಿ ವಿದ್ಯಾರ್ಥಿಗೆ ರೂ.22/–ರಂತೆ ಅರ್ಹರಾಗಿರುತ್ತಾರೆ.

ಆಂತರಿಕ ಪರೀಕ್ಷಕರು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪಾಠವೀಕ್ಷಣೆ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳ ವೀಕ್ಷಣೆಯ ಸಂಭಾವನೆಗೆ ಪ್ರತಿ ವಿದ್ಯಾರ್ಥಿಗೆ ರೂ.22/–ರಂತೆ ಮಾತ್ರ ಅರ್ಹರಾಗಿರುತ್ತಾರೆ.

ಬಾಹ್ಯ ಮತ್ತು ಆಂತರಿಕ ಪರೀಕ್ಷಕರು ಬಿಲ್ಲುಗಳನ್ನು ಪ್ರತ್ಯೇಕವಾಗಿ ತಯಾರಿಸಿಕೊಳ್ಳುವುದು. ಮಂಡಳಿಯಿಂದ ನೀಡಿರುವ ಮುಂಗಡ ಹಣದಲ್ಲಿ ಬಾಹ್ಯ ಪರೀಕ್ಷಕರ ಬಿಲ್ಲನ್ನು ನಿಯಮಾನುಸಾರ ಸಂದಾಯ ಮಾಡಿ ವ್ಯತ್ಯಾಸದ ಮೊಬಲಗಿಗೆ ಅಂತಿಮ ಸಂಭಾವನೆ ಬಿಲ್ಲನ್ನು ಸಿದ್ದಪಡಿಸಿ ಎಲ್ಲಾ ಬಿಲ್ಲುಗಳನ್ನು ಒಟ್ಟಿಗೆ ಮಂಡಳಿಗೆ ಲೆಕ್ಕಾಧಿಕಾರಿಗಳು,ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003 ಇವರ ವಿಳಾಸಕ್ಕೆ ಪರೀಕ್ಷೆ ಮುಗಿದ ಮರುದಿನವೇ ಕಳಿಸತಕ್ಕದ್ದು. ಉಳಿದ ಹಣಕ್ಕೆ ನಿರ್ದೇಶಕರು(ಇತರೆ ಪರೀಕ್ಷೆಗಳು)ಈ ಪದನಾಮಕ್ಕೆ ಮಂಡಳಿಯಿಂದ ಕಳುಹಿಸಿರುವ NEFTಚಲನ್ ಮೂಲಕ ಹಣ ಸಂದಾಯ ಮಾಡಿ ಮೂಲ ಚಲನ್‌ನ ಪ್ರತಿಯನ್ನು ಮಂಡಳಿಗೆ ಕಳುಹಿಸುವುದು ಅದರ ಝುರಾಕ್ಸ್ ಪ್ರತಿಯನ್ನು ತಮ್ಮ ಸಂಸ್ಥೆಯಲ್ಲಿಯೇ ಉಳಿಸಿಕೊಳ್ಳುವುದು.

**ವಿಶೇಷ ಸೂಚನೆ:**

ಪ್ರಾಯೋಗಿಕ ಪರೀಕ್ಷೆಗಳಿಗೆ ಮತ್ತು ಆಂತರಿಕ ಪರೀಕ್ಷೆಗಳಿಗೆ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಓ.ಎಂ.ಆರ್ ಶೀಟ್‌ಗಳನ್ನು ರಿಜಿಸ್ಟರ್ ನಂಬರ್ ಮುದ್ರಿಸಿ ಕಳುಹಿಸಲಾಗಿದೆ.ಅಭ್ಯರ್ಥಿಗಳಿಸಿರುವ ಪ್ರಾಯೋಗಿಕ ಅಂಕಗಳನ್ನು(Practical) ಕಪ್ಪು/ನೀಲಿ ಬಣ್ಣದ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಭರ್ತಿಮಾಡಿ ಶೇಡ್ ಮಾಡಿ ನಿಗದಿತ ಸ್ಥಳದಲ್ಲಿ ಆಂತರಿಕ ಮತ್ತು ಬಾಹ್ಯ ಪರೀಕ್ಷಕರಿಬ್ಬರೂ ಸಹಿ ಮಾಡಿ Marks Statement ಜೊತೆಗೆ ವಿಷಯವಾರು ಪ್ರತ್ಯೇಕ ಕವರ್‌ಗಳಲ್ಲಿ ಹಾಕಬೇಕು. ಆ ಎಲ್ಲಾ ಕವರ್‌ಗಳನ್ನು ಒಟ್ಟಿಗೆ ದೊಡ್ಡ Cloth Line Coverನಲ್ಲಿ ಹಾಕಿ ಕಳುಹಿಸಬೇಕು.

ಆಂತರಿಕ(Internal Assessment Marks/Grade) ಗೆ ಸಂಬಂಧಿಸಿದಂತೆ ಒಬ್ಬ ಅಭ್ಯರ್ಥಿಗೆ ಒಂದು O.M.R ಶೀಟ್‌ನ್ನು ಕಳುಹಿಸಿದೆ. ಅಭ್ಯರ್ಥಿ ಗಳಿಸಿರುವ ಅಂಕಗಳನ್ನು ವಿಷಯವಾರು ಭರ್ತಿ ಮಾಡಿ ಶೇಡ್ ಮಾಡುವುದು ನಿಗದಿತ ಸ್ಥಳದಲ್ಲಿ ಸಂಸ್ಥೆಯ ಪ್ರಾಂಶುಪಾಲರು ಪರಿಶೀಲಿಸಿ ಸಹಿ ಮಾಡುವುದು.ಎಲ್ಲಾ ಅಭ್ಯರ್ಥಿಗಳ ಆಂತರಿಕ ಪರೀಕ್ಷೆಯ ಓಎಂಆರ್ ಗಳನ್ನು Co-Ordination Board ನ ಅಧ್ಯಕ್ಷರು, ಸದಸ್ಯರಿಂದ ದೃಢೀಕರಿಸಿ ಮಂಡಳಿಗೆ ಕಳುಹಿಸುವುದು. ಯಾವುದೇ ಕಾರಣಕ್ಕೂ O.M.R ತುಂಬಲು ಕೆಂಪು ಇಂಕನ್ನು ಬಳಸಲೇಬಾರದು.ಓಎಂಆರ್ ಮೇಲೆ ತಿದ್ದುಪಡಿಗಳನ್ನು ಮಾಡುವುದಾಗಲೀ,ಪಿನ್/ಸ್ಟೇಪಲ್ ಮಾಡುವುದಾಗಲೀ ಮಾಡಬಾರದು. ಪ್ರಾಯೋಗಿಕ ಅಂಕತಃಖ್ತೆ ಹಾಗೂ ಆಂತರಿಕ ಅಂಕಗಳ ತಃಖ್ತೆಯಲ್ಲಿ ಇರುವ ಅಂಕಗಳು ಹಾಗೂ ಓಎಂಆರ್ ನಲ್ಲಿ ಭರ್ತಿಮಾಡಿರುವ ಅಂಕಗಳು ಒಂದೇ

ಆಗಿರಬೇಕು.ಆದ್ದರಿಂದ ಅಂಕತಃಖ್ತೆಯಿಂದ O.M.Rಗೆ ಅಂಕ ವರ್ಗಾಯಿಸುವಾಗ ಬಹಳ ಎಚ್ಚರವಹಿಸಬೇಕು.ಅಂಕಗಳನ್ನು ವರ್ಗಾಯಿಸುವಾಗ ತಪ್ಪು ಮಾಡಿದಲ್ಲಿ ಒಂದು ತಪ್ಪಿಗೆ ರೂ.100/-ಗಳ ದಂಡ ವಿಧಿಸಲಾಗುವುದು. ಆಂತರಿಕ ಅಂಕತಃಖ್ತೆ ಹಾಗೂ O.M.R ಶೀಟ್‌ಗಳನ್ನು ಒಟ್ಟಿಗೆ ಒಂದು ದೊಡ್ಡ ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಮಂಡಳಿಗೆ ಕಳುಹಿಸಲು ತಿಳಿಸಿದೆ.

ಸಹಿ/-

ನಿರ್ದೇಶಕರು

(ಇತರೆ ಪರೀಕ್ಷೆಗಳು)

**<u>ಇವರಿಗೆ</u>:-**

1)ಸಂಬಂಧಿಸಿದ ಎಲ್ಲಾ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ(ಆಂತರಿಕ ಪರೀಕ್ಷಕರು) ಮುಂದಿನ ಕ್ರಮಕ್ಕಾಗಿ.
2)ಕಛೇರಿ ಪ್ರತಿ.

ಡಬ್ಲ್ಯೂ1/ಪ್ರಾ.ಪ/ಮು.ಅ.ಸೂ/7/2015–16 ದಿನಾಂಕ: 23.05.2015

## ಸುತ್ತೋಲೆ

ವಿಷಯ:– ಡಿ.ಪಿ.ಇಡಿ. ಪ್ರಥಮ/ದ್ವಿತೀಯ ವರ್ಷದ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುವ ಬಗ್ಗೆ ಬಾಹ್ಯ ಪರೀಕ್ಷಕರಿಗೆ ಸೂಚನೆಗಳು.

**ಸೂಚನೆಗಳು:–**

1. ಈ ಸುತ್ತೋಲೆಯೊಂದಿಗೆ ನೀಡಿರುವ ಪಟ್ಟಿಯನ್ವಯ ಎಲ್ಲಾ ಬಾಹ್ಯ ಪರೀಕ್ಷಕರನ್ನೇ ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರನ್ನಾಗಿ ಮಾಡಿದ್ದು, ಪ್ರಾಯೋಗಿಕ ಪರೀಕ್ಷೆಯನ್ನು ನಿರ್ವಹಿಸುವ ಸಂಪೂರ್ಣ ಜವಾಬ್ದಾರಿಯನ್ನು ನಿಮಗೆ ವಹಿಸಲಾಗಿದೆ.
2. ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರುಗಳು ಪರೀಕ್ಷೆಗಳು ಪ್ರಾರಂಭವಾಗುವ ಮೊದಲೇ ಸಂಸ್ಥೆಗೆ ಭೇಟಿ ನೀಡಿ ಮಂಡಳಿಯಿಂದ ಕಳುಹಿಸಲಾಗಿರುವ ನಮೂನೆಗಳು ಹಾಗೂ ಎನ್.ಆರ್‌ಗಳನ್ನು ಪರಿಶೀಲಿಸಿ ವೇಳಾಪಟ್ಟಿ ತಯಾರಿಸುವುದು.
3. ಮಂಡಳಿಯಿಂದ**Marks Statement of External Examination for DPED I and II year** ಎಂಬ ನಮೂನೆಗಳನ್ನು ನಿಮ್ಮ ಡಿ.ಪಿ.ಇಡಿ ಸಂಸ್ಥೆಗೆ ಕಳುಹಿಸಲಾಗಿದ್ದು ಈ ನಮೂನೆಗಳಲ್ಲಿ ಬಾಹ್ಯ ಮತ್ತು ಆಂತರಿಕ ಮೌಲ್ಯಮಾಪಕರು ಪ್ರತ್ಯೇಕವಾಗಿ ತುಂಬುವುದು. ಈ ನಮೂನೆಗಳಲ್ಲಿ ಆಂಗ್ಲ ಭಾಷೆಯಲ್ಲಿ Capital lettersನಲ್ಲಿ ಮಂಡಳಿಯಿಂದ ಕಳುಹಿಸಿರುವ ನಾಮಪಟ್ಟಿ ಪ್ರಕಾರ ವಿದ್ಯಾರ್ಥಿಯ ನೋಂದಣಿ ಸಂಖ್ಯೆ, ಹೆಸರು ಇತ್ಯಾದಿ ವಿವರಗಳನ್ನು ತಪ್ಪಿಲ್ಲದೆ ತುಂಬುವುದು. ಅನಿವಾರ್ಯವಾಗಿ ತಪ್ಪಾದಲ್ಲಿ ಅದನ್ನು ಬಾಹ್ಯ ಪರೀಕ್ಷಕರು ದೃಢೀಕರಿಸಬೇಕು.
4. ಪ್ರತ್ಯೇಕವಾಗಿ ಭರ್ತಿ ಮಾಡಿದ ನಮೂನೆಗಳನ್ನು ಮುಖ್ಯ ಅಧೀಕ್ಷಕರು/ಬಾಹ್ಯ ಪರೀಕ್ಷಕರು ವಿದ್ಯಾರ್ಥಿಗಳು ಪಡೆದ ಅಂಕಗಳ ಸರಾಸರಿ ಅಂಕಗಳನ್ನು ಕ್ರೋಢೀಕರಿಸಿ ಮೂಲ Marks statementನಲ್ಲಿ ತುಂಬಿ ಕೆಳಗೆ ಸಹಿ ಮಾಡಿ ಹೆಸರು ಮತ್ತು ವಿಳಾಸದೊಂದಿಗೆ ಎಲ್ಲಾ ಮಾಹಿತಿಗಳನ್ನು (ಪ್ರತ್ಯೇಕ ಅಂಕತಃಖ್ತೆ ಹಾಗೂ ಕ್ರೋಢೀಕೃತ ಅಂಕತಃಖ್ತೆ ಗಳನ್ನು ಹಾಗೂ OMRಶೀಟ್‌ಗಳನ್ನು) ಪ್ರಾಯೋಗಿಕ ಪರೀಕ್ಷೆ ಪೂರ್ಣಗೊಂಡ ಮರುದಿನವೇ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಕಳುಹಿಸುವುದು. ಇವೆಲ್ಲವುಗಳನ್ನೊಳಗೊಂಡ ಮಾಹಿತಿಗಳನ್ನು ಮೊಹರು ಮಾಡಿರುವ ಲಕೋಟೆಯಲ್ಲಿರಿಸಿ ಸಹಾಯಕ ನಿರ್ದೇಶಕರು (ಡಿ.ಪಿ.ಇಡಿ. ವಿಭಾಗ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,4ನೇ ಮಹಡಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003 ಇವರ ವೈಯುಕ್ತಿಕ ವಿಳಾಸಕ್ಕೆ ಕಳುಹಿಸುವುದು.

**ಸಂಬಂಧಿಸಿದ ಲಕೋಟೆಗಳ ಮೇಲೆ ನಮೂದಿಸಬೇಕಾದ ವಿವರ**

1. ಡಿ.ಪಿ.ಇಡಿ. ಪ್ರಥಮ, ಡಿ.ಪಿ.ಇಡಿ ದ್ವಿತೀಯ ಪ್ರಾಯೋಗಿಕ ಪರೀಕ್ಷೆಗಳು 2015.
2. ಪರೀಕ್ಷಾ ಕೇಂದ್ರದ ಹೆಸರು ಮತ್ತು ವಿಳಾಸ ತಪ್ಪದೆ ನಮೂದಿಸುವುದು.
3. ಪರೀಕ್ಷಾ ಕೇಂದ್ರದ ಸಂಕೇತ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.
4. ಪುನರಾವರ್ತಿತ ಅಭ್ಯರ್ಥಿಗಳು ಈ ಬಾರಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರೆ ಅಂತಹವರಿಗೆ ನೋಂದಣಿ ಸಂಖ್ಯೆಯನ್ನು ನಮೂದಿಸಿ ಕೆಂಪು ಶಾಯಿಯಲ್ಲಿ **“ R “** ಎಂದು ನಮೂದಿಸಿ ಬೇರೆ ಅಂಕಪಟ್ಟಿಯನ್ನು ಕಳುಹಿಸುವುದು

5. ಪ್ರಾಯೋಗಿಕ ಪರೀಕ್ಷೆಯಲ್ಲಿ ಪರೀಕ್ಷಕರು ವಿದ್ಯಾರ್ಥಿಗಳ ಅರ್ಹತೆಗಿಂತ ಹೆಚ್ಚು ಅಂಕಗಳನ್ನು ನೀಡದಂತೆ ಕ್ರಮ ತೆಗೆದುಕೊಂಡು ಪರೀಕ್ಷೆಯನ್ನು ಕಾಲಮಿತಿಯಲ್ಲಿ ಮುಗಿಸಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ಮುಗಿದ ಮರುದಿವಸವೇ ಅಂಕಪಟ್ಟಿಯನ್ನು ಪರೀಕ್ಷಾ ಮಂಡಳಿಗೆ ಸಲ್ಲಿಸುವುದು. Student number ಹಾಕಬಾರದು.
6. ಪರೀಕ್ಷೆಗಳಲ್ಲಿ ಯಾವುದೇ ಅವ್ಯವಹಾರ ಕಂಡುಬಂದಲ್ಲಿ ಮಂಡಳಿಗೆ ತಕ್ಷಣವೇ ತಿಳಿಸುವುದು.
7. ಒಮ್ಮೆ ಭರ್ತಿ ಮಾಡಿ ಮಂಡಳಿಗೆ ಕಳುಹಿಸಿದ ಪ್ರಾಯೋಗಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಬದಲಾಯಿಸಲಾಗುವುದಿಲ್ಲ. ಏನಾದರು ತಪ್ಪುಗಳು ಕಂಡುಬಂದಲ್ಲಿ ಪ್ರಾಯೋಗಿಕ ಪರೀಕ್ಷೆಯ ಆಂತರಿಕ ಮತ್ತು ಬಾಹ್ಯ ಪರೀಕ್ಷಕರಿಬ್ಬರು ಸಂಪೂರ್ಣ ಜವಾಬ್ದಾರರು.
8. ಪ್ರಾಯೋಗಿಕ ಪರೀಕ್ಷೆ ನಡೆಸಲು ಮುಂಗಡ ಹಣವನ್ನು ಸಂಬಂಧಿಸಿದ ಡಿ.ಪಿ.ಇಡಿ ಸಂಸ್ಥೆಯ ಪ್ರಾಂಶುಪಾಲರಿಗೆ(ಆಂತರಿಕ ಪರೀಕ್ಷಕರಿಗೆ) ನೀಡಲಾಗಿದೆ. ಈ ಕೆಳಕಂಡ ದರಗಳಲ್ಲಿ ಸಂಭಾವನೆ ಬಿಲ್ಲನ್ನು ಸಿದ್ದಪಡಿಸಿ ಆಂತರಿಕ ಪರೀಕ್ಷಕರಿಗೆ ನೀಡಲು ತಿಳಿಸಿದೆ.ಅವರಿಗೆ ನಿಮ್ಮ ಸಂಭಾವನೆ ಬಿಲ್ಲನ್ನು ನಿಯಮಾನುಸಾರ ಪರಿಶೀಲಿಸಿ ಹಣ ಸಂದಾಯ ಮಾಡುವಂತೆ ಸೂಚಿಸಲಾಗಿದೆ.ಯಾವುದಾದರು ಸಂಸ್ಥೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಒಂದಕ್ಕಿಂತ ಹೆಚ್ಚು ಬೋರ್ಡ್ ಮಾಡಿಕೊಂಡಲ್ಲಿ ನೀವು ಪಾಠ ವೀಕ್ಷಣೆ ಮಾಡಿದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಾತ್ರ ಸಂಭಾವನೆ ಬಿಲ್ಲನ್ನು ಮಾಡಿಕೊಳ್ಳಬಹುದು. ಬಿಲ್ಲಿನಲ್ಲಿ ನಮೂದಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಸಂಸ್ಥೆಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ತಾಳೆ ಹೊಂದುವಂತೆ ಆಂತರಿಕ ಮತ್ತು ಬಾಹ್ಯ ಪರೀಕ್ಷಕರು ಎಚ್ಚರ ವಹಿಸತಕ್ಕದ್ದು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪರೀಕ್ಷೆಗೆ ಅಗತ್ಯವಿದ್ದಷ್ಟು ದಿನಗಳನ್ನು ಮಾತ್ರ ಬಳಸಿಕೊಳ್ಳತಕ್ಕದ್ದು. ಅಗತ್ಯಕ್ಕಿಂತ ಹೆಚ್ಚಿನ ದಿನಗಳಿಗೆ ಬಿಲ್ಲನ್ನು ಸಲ್ಲಿಸಿದಲ್ಲಿ ಆ ಮೊಬಲಗನ್ನು ಕಡತಗೊಳಿಸಲಾಗುವುದು. ಹಿಂದಿನ ಸಾಲುಗಳ ಬಿಲ್ಲುಗಳನ್ನು ಪರಿಶೀಲಿಸಲಾಗಿ ಅನಾವಶ್ಯಕವಾಗಿ ದಿನಭತ್ಯೆಯನ್ನು ಹೆಚ್ಚಿಗೆ ಕೋರಿರುವುದು ಕಂಡು ಬರುತ್ತದೆ.ಆದ್ದರಿಂದ ಒಂದು ಬೋರ್ಡಿಗೆ ಒಂದು ದಿನಕ್ಕೆ ಕನಿಷ್ಠ 6 ಪಾಠಗಳನ್ನು ಕಡ್ಡಾಯವಾಗಿ ವೀಕ್ಷಣೆ ಮಾಡತಕ್ಕದ್ದು ಮತ್ತು ಮೈದಾನದಲ್ಲಿ(ಹೊರಾಂಗಣ ಕ್ರೀಡಾ ಚಟುವಟಿಕೆಗಳು) ಕನಿಷ್ಠ 15 ವಿದ್ಯಾರ್ಥಿಗಳ ಪರಿವೀಕ್ಷಣೆ ನಡೆಸತಕ್ಕದ್ದು.

**<u>ಡಿ.ಪಿ.ಇಡಿ ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ಸಂಭಾವನೆ ವಿವರ:</u>**

| ಕ್ರ.ಸಂ | ವಿವರ | ಸಂಭಾವನೆ |
|---|---|---|
| 01 | ಪ್ರಾಯೋಗಿಕ. ಪರೀಕ್ಷೆ ನಡೆಸುವ ಮುಖ್ಯಸ್ಥರ(ಬಾಹ್ಯ ಪರೀಕ್ಷಕರು)ಸಂಭಾವನೆ (ಒಂದು ದಿನಕ್ಕೆ) | ರೂ.65/- |
| ಪಾಠ ವೀಕ್ಷಣೆಗೆ ಸಂಭಾವನೆ | | |
| 01 | ಪ್ರಾಯೋಗಿಕ ಪರೀಕ್ಷೆಯ ಪಾಠ ವೀಕ್ಷಣೆಗೆ ಎರಡು ಪಾಠಗಳಿಗೆ ಸಂಭಾವನೆ(ಒಬ್ಬ ವಿದ್ಯಾರ್ಥಿಗೆ) | ರೂ.9x2=ರೂ.18/- |
| 02 | ಹೊರಾಂಗಣ ಕ್ರೀಡಾ ಚಟುವಟಿಕೆಗಳ ವೀಕ್ಷಣೆಗೆ ಸಂಭಾವನೆ(ಒಬ್ಬ ವಿದ್ಯಾರ್ಥಿಗೆ) | ರೂ.04/- |
| ಒಟ್ಟು ಸಂಭಾವನೆ (ಒಬ್ಬ ವಿದ್ಯಾರ್ಥಿಗೆ) | | ರೂ.22/- |

ಬಾಹ್ಯ ಪರೀಕ್ಷಕರು(1)ರೂ.65/-ಗಳ ಸಂಭಾವನೆ(ಒಂದು ದಿನಕ್ಕೆ), (2) ಸ್ಥಳೀಯರಲ್ಲದೆ ಬೇರೆ ಸ್ಥಳದಿಂದ ಬಂದಿದ್ದಲ್ಲಿ ಕೆ.ಸಿ.ಎಸ್.ಆರ್ ನಿಯಮದಂತೆ ಪ್ರಯಾಣ ಭತ್ಯೆ (ಕೆ.ಎಸ್.ಆರ್.ಟಿ.ಸಿ ಬಸ್ ಟಿಕೆಟ್ ಲಗತ್ತಿಸಬೇಕು) (3)

ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪಾಠವೀಕ್ಷಣೆ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳ ವೀಕ್ಷಣೆಯ ಸಂಭಾವನೆಗೆ ಪ್ರತಿ ವಿದ್ಯಾರ್ಥಿಗೆ ರೂ.22/–ರಂತೆ ಅರ್ಹರಾಗಿರುತ್ತಾರೆ.

**ವಿಶೇಷ ಸೂಚನೆ:**

ಪ್ರಾಯೋಗಿಕ ಪರೀಕ್ಷೆಗಳಿಗೆ ಮತ್ತು ಆಂತರಿಕ ಪರೀಕ್ಷೆಗಳಿಗೆ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ O.M.R ಶೀಟ್‌ಗಳನ್ನು ರಿಜಿಸ್ಟರ್ ನಂಬರ್ ಮುದ್ರಿಸಿ ಕಳುಹಿಸಲಾಗಿದೆ. ಅಭ್ಯರ್ಥಿಗಳಿಸಿರುವ ಪ್ರಾಯೋಗಿಕ ಅಂಕಗಳನ್ನು(Practical) ಕಪ್ಪು/ನೀಲಿ ಬಣ್ಣದ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಭರ್ತಿಮಾಡಿ ಶೇಡ್ ಮಾಡಿ ನಿಗದಿತ ಸ್ಥಳದಲ್ಲಿ ಆಂತರಿಕ ಮತ್ತು ಬಾಹ್ಯ ಪರೀಕ್ಷಕರಿಬ್ಬರೂ ಸಹಿ ಮಾಡಿ Marks Statement ಜೊತೆಗೆ ವಿಷಯವಾರು ಪ್ರತ್ಯೇಕ ಕವರ್‌ಗಳಲ್ಲಿ ಹಾಕಬೇಕು. ಆ ಎಲ್ಲಾ ಕವರ್‌ಗಳನ್ನು ಒಟ್ಟಿಗೆ ದೊಡ್ಡ Cloth Line Coverನಲ್ಲಿ ಹಾಕಿ ಕಳುಹಿಸಬೇಕು.

ಸಹಿ/–

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಇವರಿಗೆ:–**

1)ಸಂಬಂಧಿಸಿದ ಎಲ್ಲಾ ಬಾಹ್ಯ ಪರೀಕ್ಷಕರುಗಳ ಮುಂದಿನ ಕ್ರಮಕ್ಕಾಗಿ.

**ಪ್ರತಿಯನ್ನು:–**

1)ಸಂಬಂಧಿಸಿದ ಎಲ್ಲಾ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ(ಆಂತರಿಕ ಪರೀಕ್ಷಕರು) ಮುಂದಿನ ಕ್ರಮಕ್ಕಾಗಿ.

2)ಕಛೇರಿ ಪ್ರತಿ.

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು–3

ಡಬ್ಲ್ಯೂ1/ಪ್ರಾ.ಪ/ಸಾ.ಹ.ಬಿ/8/2015–16 ದಿನಾಂಕ: 23.05.2015

## **ಸುತ್ತೋಲೆ**

ವಿಷಯ: ಜೂನ್–2015 ರ ಡಿ.ಪಿ.ಇಡಿ ಪರೀಕ್ಷೆಗೆ ಮುಖ್ಯ ಅಧೀಕ್ಷಕರಿಗೆ
ಹೆಚ್ಚಿನ ತಿಳುವಳಿಕೆ ಕುರಿತು.

**1. ಅವ್ಯವಹಾರಗಳನ್ನು (ಮಾಲ್ ಪ್ರಾಕ್ಟೀಸ್) ತಪ್ಪಿಸುವಿಕೆ:–**

ಅ) ಪರೀಕ್ಷೆಯನ್ನು ಸಮರ್ಪಕವಾಗಿ ನಡೆಸುವ ಸಂದರ್ಭದಲ್ಲಿ ಪರೀಕ್ಷಾ ಕೊಠಡಿಗಳ ಮೇಲ್ವಿಚಾರಕರ ಜವಾಬ್ದಾರಿ ಗುರುತರವಾದದ್ದು. ಈ ಬಗ್ಗೆ ಯಾವುದೇ ಕರ್ತವ್ಯಲೋಪ ಆದಲ್ಲಿ ಅದನ್ನು ತೀವ್ರವಾಗಿ ಪರಿಗಣಿಸಲಾಗುವುದು.

ಆ) ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿಗೆ ಬಿಡುವ ಮುನ್ನ ಅವರಲ್ಲಿರಬಹುದಾದ ಎಲ್ಲಾ ವಸ್ತುಗಳನ್ನು ಶೋಧನೆ ಮಾಡಿ, ನಕಲು ಮಾಡುವುದು ಇತ್ಯಾದಿ ಅವ್ಯವಹಾರಗಳನ್ನು ತಪ್ಪಿಸಲು ಅವರು ತಮ್ಮ ಜೊತೆಗೆ ಪುಸ್ತಕಗಳು, ಬರವಣಿಗೆಯುಳ್ಳ ಚೀಟಿ ವಗೈರೆಗಳನ್ನು ಹೊಂದಿರದಂತೆ ನೋಡಿಕೊಳ್ಳಬೇಕೆಂದು ಕೊಠಡಿಯ ಮೇಲ್ವಿಚಾರಕರಿಗೆ ತಿಳುವಳಿಕೆ ನೀಡಬೇಕು. ಶಾಲಾ ವಿದ್ಯಾರ್ಥಿಗಳಿಗೂ ಮತ್ತು ಪುನರಾವರ್ತಿತ (ರಿಪೀಟರ್ಸ್) ವಿದ್ಯಾರ್ಥಿಗಳಿಗೂ ಭಾವಚಿತ್ರ ಅಳವಡಿಸಿರುವುದರಿಂದ ಅವರ ಪಾಸ್‌ಪೋರ್ಟ್ ಸೈಜಿನ ಪೋಟೋವನ್ನು ಪರಿಶೀಲಿಸಿ ಅಸಲಿ ಪರೀಕ್ಷಾರ್ಥಿಯೆಂದು ಖಾತರಿ ಮಾಡಿಕೊಳ್ಳತಕ್ಕದ್ದು. ಪರೀಕ್ಷೆ ಬರೆಯುವ ಮೊದಲೇ ವಿದ್ಯಾರ್ಥಿಯ ಗುರುತು ಖಚಿತಪಡಿಸಿಕೊಳ್ಳುವುದು.ಬದಲಾವಣೆಗಳು ಇದ್ದಲ್ಲಿ ತಕ್ಷಣ ಮಂಡಳಿಗೆ ವರದಿ ಮಾಡುವುದು.

ಇ) ಉತ್ತರ ಪತ್ರಿಕೆಯಲ್ಲಿ ಬರೆದಿರುವ ನೋಂದಣಿ ಸಂಖ್ಯೆಯೂ ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿರುವ ಇರುವ ನೋಂದಣಿ ಸಂಖ್ಯೆಯೂ ಒಂದೇ ಆಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದೆಂದು ಮೇಲ್ವಿಚಾರಕರಿಗೆ ತಿಳಿಸಬೇಕು. ಅಭ್ಯರ್ಥಿಗಳು ನೊಂದಣಿ ಸಂಖ್ಯೆಯನ್ನು ಅಳಿಸುವುದು ಅಥವಾ ಅದರ ಮೇಲೆ ತಿದ್ದುವುದು ಇವುಗಳಿಗೆ ಅವಕಾಶ ಕೊಡಬಾರದು.ಉತ್ತರ ಪತ್ರಿಕೆಗಳ ಮೇಲೆ ನೊಂದಣಿ ಸಂಖ್ಯೆಯಲ್ಲಿ ಮಾಡಿರತಕ್ಕ ತಿದ್ದುಪಡಿಗೆ ಮುಖ್ಯ ಅಧೀಕ್ಷಕರು ತಮ್ಮ ಪೂರ್ಣ ಸಹಿಯೊಂದಿಗೆ ದೃಢೀಕರಿಸಬೇಕು.

ಈ) ಮೌಲ್ಯಮಾಪನದಲ್ಲಿ ಅವ್ಯವಹಾರವನ್ನು ತಡೆಗಟ್ಟುವ ಉದ್ದೇಶದಿಂದ ಕೋಡಿಂಗ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ನೋಂದಣಿ ಸಂಖ್ಯೆಗಳನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಿಷ್ಟವಾಗಿ ಸೂಚಿಸಿರುವ ಜಾಗದಲ್ಲಿ ಬರೆಯುವಂತೆ ಮುಖ್ಯ ಅಧೀಕ್ಷಕರು ಕೊಠಡಿ ಮೇಲ್ವಿಚಾರಕರಿಗೆ ಸೂಚಿಸಬೇಕಾಗಿ ತಿಳಿಸಲಾಗಿದೆ.ನಿಯಮದಂತೆ ನೋಂದಣಿ ಸಂಖ್ಯೆ ಬರೆಯದೆ ಉತ್ತರ ಪತ್ರಿಕೆ ಒಳಪುಟಗಳಲ್ಲಿ ಬರೆಯುವುದು ಕಂಡುಬಂದರೆ ಅಂತಹ ವಿದ್ಯಾರ್ಥಿಗಳನ್ನು ಅವ್ಯವಹಾರಕ್ಕೆ ಒಳಪಟ್ಟವರು ಎಂದು ಪರಿಗಣಿಸಲಾಗುವುದು ಎಂಬ ವಿಷಯದ ತಿಳುವಳಿಕೆ ನೀಡತಕ್ಕದ್ದು.

ಉ) ಪರೀಕ್ಷಾ ಕೊಠಡಿಯಲ್ಲಿ ಯಾವುದೇ ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳುವುದು ಮೇಲ್ವಿಚಾರಕರ/ಸಿಬ್ಬಂದಿಯವರ ಜವಾಬ್ದಾರಿಯಾಗಿರುತ್ತದೆ. ಅವರುಗಳು ಗಮನಿಸಿದ ಮೇಲೂ ಅವರ ಕಣ್ಣು ತಪ್ಪಿಸಿ ಅಂತಹ ಅವ್ಯವಹಾರಗಳು ನಡೆಯುತ್ತಿದ್ದಲ್ಲಿ, ಮುಖ್ಯ ಅಧೀಕ್ಷಕರಿಗೆ ಕೂಡಲೇ ತಿಳಿಸಬೇಕು. ಅಂತಹ ಅವ್ಯವಹಾರಗಳನ್ನು ಪ್ರೋತ್ಸಾಹಿಸುವ ಕೊಠಡಿ ಮೇಲ್ವಿಚಾರಕರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು

ಕೇಂದ್ರದಲ್ಲಿ ಪತ್ತೆ ಹಚ್ಚಲ್ಪಟ್ಟ ಅವ್ಯವಹಾರಗಳ ಬಗ್ಗೆ ತಕ್ಷಣ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕರು(ಇತರೆ ಪರೀಕ್ಷೆಗಳು) ಅವರಿಗೆ ಈ ಕೆಳಕಂಡ ವಿವರಗಳನ್ನು ಹೊಂದಿದ ವರದಿಯನ್ನು ಕಳುಹಿಸತಕ್ಕದ್ದು.

1. ಅಭ್ಯರ್ಥಿಯ ಹೆಸರು ಮತ್ತು ನೊಂದಣಿ ಸಂಖ್ಯೆ ಹಾಗೂ ಅವರ ವಿಳಾಸ.
2. ತಂದೆಯ ಹೆಸರು.
3. ಯಾವ ಶಾಲೆಯ ಮೂಲಕ ಪರೀಕ್ಷೆಗೆ ಕುಳಿತಿರುವುದು.
4. ಕೇಂದ್ರದ ಹೆಸರು.
5. ಅವ್ಯವಹಾರ ಪತ್ತೆ ಹಚ್ಚಿದ ಅಧಿಕಾರಿಯ ಹೆಸರು ಮತ್ತು ವಿಳಾಸ.
6. ಕೊಠಡಿಯ ಮೇಲ್ವಿಚಾರಕರ ಹೆಸರು.
7. **ಮುಖ್ಯ ಅಧೀಕ್ಷಕರ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿರುವ ಹೇಳಿಕೆ ಅಲ್ಲದೆ ಮೇಲಿನ ವರದಿಯೊಂದಿಗೆ ಈ ಕೆಳಗಿನ ದಸ್ತಾವೇಜುಗಳನ್ನು ತಪ್ಪದೇ ಲಗತ್ತಿಸಿರಬೇಕು.**

ಅ)ಕೊಠಡಿಯ ಮೇಲ್ವಿಚಾರಕರ ಹೇಳಿಕೆ.

ಆ)ಅಭ್ಯರ್ಥಿಯ ಹೇಳಿಕೆ.

ಇ)ಅಭ್ಯರ್ಥಿಯು ಉಪಯೋಗಿಸುತ್ತಿದ್ದ ಉತ್ತರ ಪತ್ರಿಕೆ, ಅವನ/ಅವಳ ಪ್ರವೇಶ ಪತ್ರ, ಪ್ರಶ್ನೆ ನಕಲು ಮಾಡಲು ಉಪಯೋಗಿಸುತ್ತಿದ್ದ/ಕೈಯಲ್ಲಿ ಬರೆದ ಅಥವಾ ಮುದ್ರಿತ ಚೀಟಿಗಳು ಪುಸ್ತಕ (ಇವುಗಳಿಗೆ ಮುಖ್ಯ ಅಧೀಕ್ಷಕರಿಂದ ಸಹಿ ಹಾಕಿಸಲ್ಪಟ್ಟಿರಬೇಕು) ಇವುಗಳೆಲ್ಲವನ್ನೂ ವರದಿಗೆ ಸೇರಿಸಿ ದಾರದಿಂದ ಹೊಲಿದಿರತಕ್ಕದ್ದು.

ವರದಿಯನ್ನು ಕಳುಹಿಸುವ ಮುನ್ನ ಅಭ್ಯರ್ಥಿಯ ಬಳಿಯಲ್ಲಿದ್ದ ಚೀಟಿಗಳು ಅಂದಿನ ವಿಷಯ ಮತ್ತು ಆ ಅವಧಿಗೆ ಸಂಬಂಧಪಟಿವೆಯೇ ಎಂದು, ಅಭ್ಯರ್ಥಿಯು ಅವುಗಳಿಂದ ನಕಲು ಮಾಡಿರುತ್ತಾನಯೇ ಎಂಬುದನ್ನು ಪರೀಕ್ಷಿಸಿ ವರದಿಯ 7ನೇ ಕಾಲಂನ ಮುಖ್ಯ ಅಧೀಕ್ಷಕರ ಹೇಳಿಕೆಯಲ್ಲಿ ಸೇರಿಸಿರಬೇಕು. ಹಾಗೂ ನಿಮಗೆ ಕಳುಹಿಸಲಾಗುತ್ತಿರುವ Centerwise Nominal roll (CNR)ನಲ್ಲಿ Scan ಆಗಿಬಂದಿರುವ Photo ಹಾಗೂ ಸಹಿಗಳನ್ನು ಗಮನಿಸುವುದು. (ಅಭ್ಯರ್ಥಿಯು ನಕಲು ಮಾಡಿದ ಅವ್ಯವಹಾರಗಳು ನಡೆಸಿದ ಪರೀಕ್ಷೆಯಿಂದಲೇ ಅಭ್ಯರ್ಥಿಯನ್ನು ಹೊರಗೆ ಕಳುಹಿಸುವುದು.)ಅಭ್ಯರ್ಥಿಯು ಹೊಂದಿದ್ದ ಚೀಟಿಗಳು ಅಂದಿನ ವಿಷಯದ ಅಥವಾ ಆ ಅವಧಿಗೆ ಸಂಬಂಧಿಸಿಲ್ಲವಾದಲ್ಲಿ ಅಭ್ಯರ್ಥಿಗೆ ಒಂದು ತೀವ್ರ ಎಚ್ಚರಿಕೆ ನೀಡಿ ಪರೀಕ್ಷೆ ಬರೆಯಲು ಅನುಮತಿ ನೀಡಬೇಕು.

**2. <u>ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ತೆರೆಯುವುದರ ಬಗ್ಗೆ:-</u>**

ಅ) ಪರೀಕ್ಷೆಯು ಪ್ರಾರಂಭವಾಗುವ ಸಮಯಕ್ಕೆ 1 ಘಂಟೆ ಮುಂಚಿತವಾಗಿ ಖಜಾನೆಯಿಂದ ಆ ಅವಧಿಗೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ತೆಗೆದುಕೊಂಡು ವೇಳಾಪಟ್ಟಿಯೊಂದಿಗೆ ತಾಳೆ ಮಾಡಿ ನೀವು ತೆಗೆದುಕೊಂಡಿರುವ ಪ್ರಶ್ನೆ ಪತ್ರಿಕೆಯ ಲಕೋಟೆಯು ಆ ದಿನಕ್ಕೆ ಮತ್ತು ಆ ವಿಷಯಕ್ಕೆ ಸಂಬಂಧಪಟ್ಟದ್ದೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಆ) ಪ್ರಶ್ನೆ ಪತ್ರಿಕೆ ಲಕೋಟೆಯ ಮೇಲಿನ ಮೊಹರುಗಳು ಸರಿಯಾಗಿದೆ ಎಂಬುದನ್ನು ಮತ್ತು ಆ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ಮಾತ್ರ ತೆರೆಯಲ್ಪಟ್ಟಿರುವ ಬಗ್ಗೆ ಇಬ್ಬರು ಕೊಠಡಿಯ ಮೇಲ್ವಿಚಾರಕರಿಂದ ಪರೀಕ್ಷಿಸಿಕೊಂಡು ಆ ಕುರಿತು ಅವರಿಂದ ಲಕೋಟೆಯ ಮೇಲೆ ಗೊತ್ತು ಮಾಡಿರುವ ಜಾಗದಲ್ಲಿ ಮೊಹರುಗಳು ಸರಿಯಾಗಿದೆ ಎಂದು ಬರೆಸಿ ಅವರುಗಳಿಂದ ದಿನಾಂಕ ಮತ್ತು ವೇಳೆ ನಮೂದಿಸಿ ಸಹಿ ಪಡೆಯಬೇಕು.

ಇ) ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ಪಡೆದ ನಂತರ ಉಳಿದವುಗಳನ್ನು ಸುರಕ್ಷಿತವಾಗಿ ಕೇಂದ್ರದಲ್ಲಿ ಇಡಬೇಕು. ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಹಂಚಲು ಕಳುಹಿಸುವ ಮೊದಲೇ ವಿಷಯದ ಸಂಕೇತ ಸಂಖ್ಯೆ (ಕೋಡ್ ಸಂಖ್ಯೆ) ಮತ್ತು ದಿನಾಂಕ ಮುಂತಾದವುಗಳನ್ನು ವೇಳಾಪಟ್ಟಿಗೆ ಅನುಗುಣವಾಗಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕು.ಲಕೋಟೆಯೊಳಗಿನ ಪ್ರಶ್ನೆ ಪತ್ರಿಕೆಗಳನ್ನು ಸಹ ಪರೀಕ್ಷಿಸಿ ಅವು ಆ ಅವಧಿಗೆ ಸಂಬಂಧಪಟ್ಟವೇ ಆಗಿವೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

ಯಾವುದೇ ಅಭ್ಯರ್ಥಿಯು ತನ್ನ ಉತ್ತರ ಪತ್ರಿಕೆಯನ್ನು ಪರೀಕ್ಷಾ ಸಮಯ ಮುಗಿದ ಕೂಡಲೇ ಕೊಠಡಿಯ ಮೇಲ್ವಿಚಾರಕರಿಗೆ ಕೊಡದೇ ಹೊರಟುಹೋಗುವುದು ಅಥವಾ ಪರೀಕ್ಷಾ ಕೊಠಡಿಯಲ್ಲಿ ಯಾವುದೇ ರೀತಿಯ ಅಶಿಸ್ತನ್ನು ತೋರಿದಲ್ಲಿ ಅಂತಹವರನ್ನು ಮುಂದಿನ ನಾಲ್ಕು ಪರೀಕ್ಷೆಗೆ ಹಾಜರಾಗಲು **ಅನರ್ಹರೆಂದು** ಘೋಷಿಸಲಾಗುವುದು. (ಡಿಬಾರ್) ಎಂದು ಮುಖ್ಯ ಅಧೀಕ್ಷಕರು ಕೇಂದ್ರಗಳಲ್ಲಿ ನೋಟೀಸ್ ಬೋರ್ಡಿನ ಮೇಲೆ ಬರೆದು ಹೀಗೆ ತಪ್ಪು ಮಾಡಿದ ಅಭ್ಯರ್ಥಿಗಳನ್ನು ಮುಂದಿನ ಯಾವುದೇ ಅವಧಿಗೆ ಪರೀಕ್ಷೆಗೆ ಕೂಡಲು ಬಿಡಬಾರದು.ಮತ್ತು ಈ ಬಗ್ಗೆ ಮಂಡಳಿ ನಿರ್ದೇಶಕರ ವೈಯಕ್ತಿಕ ವಿಳಾಸಕ್ಕೆ ವರದಿ ಮಾಡತಕ್ಕದ್ದು.

ಯಾವುದೇ ಅವಧಿಯ ಪರೀಕ್ಷೆ ಮುಗಿದ ಕೂಡಲೇ ಅಭ್ಯರ್ಥಿಗಳಿಂದ ಅವರು ಪರೀಕ್ಷಾ ಕೊಠಡಿಯನ್ನು ಬಿಡುವ ಮುನ್ನ ಅವರ ಉತ್ತರ ಪುಸ್ತಕಗಳನ್ನು ಪಡೆದುಕೊಳ್ಳುವ ಜವಾಬ್ದಾರಿ ಕೊಠಡಿ ಮೇಲ್ವಿಚಾರಕರು ಮತ್ತು ಮುಖ್ಯ ಅಧೀಕ್ಷಕರಿಗೆ ಸೇರಿದ್ದಾಗಿರುತ್ತದೆ.

**3. ಅಭ್ಯರ್ಥಿಗಳನ್ನು ಗುರುತಿಸುವುದು:-**

ಪರೀಕ್ಷೆ ತೆಗೆದುಕೊಂಡಿರುವ ಶಾಲಾ ವಿದ್ಯಾರ್ಥಿಗಳನ್ನು (ರೆಗ್ಯುಲರ್ ಪ್ರೆಷ್ ಕ್ಯಾಂಡಿಡೇಟ್ಸ್) ಅವರವರ ಶಾಲೆಯ ಯಾವುದೇ ಒಬ್ಬ ಉಪಾಧ್ಯಾಯರು ಗುರುತಿಸಬೇಕು. ನಕಲು ಅಭ್ಯರ್ಥಿಗೆ ಪರೀಕ್ಷೆ ಬರೆಯಲು (ಇಂಪರ್ಸೊನೇಷನ್) ಅವಕಾಶ ಕೊಡದೆ ಇರಲು ಪ್ರತಿ ಅಭ್ಯರ್ಥಿಯ ಉತ್ತರ ಪುಸ್ತಕ ಪಡೆಯಲು ಕೊಡುವ ದಾಖಲೆಯಲ್ಲಿನ ಸಹಿ ಹಾಗೂ ಅವರು ಪ್ರವೇಶ ಪತ್ರದಲ್ಲಿ ಮಾಡಿರುವ ಸಹಿ ಸಾಮ್ಯ ಹೊಂದುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಕೊಠಡಿಯ ಮೇಲ್ವಿಚಾರಕರಿಗೆ ತಿಳುವಳಿಕೆ ನೀಡುವುದು. ಇವೆರಡೂ ಸಹಿಗಳಲ್ಲಿ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲಿ ಈ ಬಗ್ಗೆ ವ್ಯತ್ಯಾಸವನ್ನು ವರದಿ

ಮಾಡುವುದಲ್ಲದೆ ಅಂತಹ ಅಭ್ಯರ್ಥಿಯು ತನ್ನ ಗುರುತನ್ನು ನಿಮ್ಮ ಸಮಾಧಾನಕ್ಕೆ ಬರುವಂತೆ ಪರಿಚಯಿಸಿಕೊಡಬೇಕೆಂದು ಕೇಳಿರಿ.ಅಭ್ಯರ್ಥಿಯು ಉತ್ತರ ಪತ್ರಿಕೆ ಹಿಂದಿರುಗಿಸುವಾಗಲೂ ನಿಗಧಿತ ನಮೂನೆಯಲ್ಲಿ (ಅಂದರೆ ಖಾಲಿ) ಉತ್ತರ ಪತ್ರಿಕೆ ನೀಡುವಾಗ ಸಹಿ ತೆಗೆದುಕೊಂಡ ನಮೂನೆಯಲ್ಲಿ ಮತ್ತೆ ಸಹಿ ಪಡೆಯಬೇಕು.ನಿಮಗೆ ಕಳುಹಿಸಲಾಗುತ್ತಿರುವ ಸಿ.ಎನ್.ಆರ್.ಗಳಲ್ಲಿ ಅಭ್ಯರ್ಥಿಗಳ ಪೋಟೋ ಹಾಗೂ ಸಹಿಯನ್ನು ಸ್ಕ್ಯಾನಿಂಗ್ ಮಾಡಿ ಪ್ರಿಂಟ್ ಮಾಡಲಾಗಿದೆ. ಹಾಗೇ ಅದರ ಪಕ್ಕದಲ್ಲಿಯೇ ಅಭ್ಯರ್ಥಿ ಪ್ರತಿ ದಿನ ಸಹಿ ಮಾಡಬೇಕಿರುವ ಹಾಗೂ ಅಭ್ಯರ್ಥಿಗೆ ನೀಡುವ ಮುಖ್ಯ ಉತ್ತರ ಪತ್ರಿಕೆ ಸಂಖ್ಯೆ ಹಾಕುವ ಕಾಲಂ ನೀಡಲಾಗಿದೆ. ಅದರಲ್ಲಿ ನೋಂದಣಿ ಸಂಖ್ಯೆ, ಸಹಿ ಹಾಗೂ ಪೋಟೋ ಗುರುತಿಸಿ ವಿದ್ಯಾರ್ಥಿ ಗೈರುಹಾಜರಾಗಿದ್ದಲ್ಲಿ **AB** ಎಂದು ಕೊಠಡಿ ಮೇಲ್ವಿಚಾರಕರು ನಮೂದಿಸುವುದು. ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ರೋಢೀಕೃತ ಗೈರುಹಾಜರು ಪಟ್ಟಿ ತಯಾರಿಸಿ ಎಲ್ಲ ಪಟ್ಟಿಗಳನ್ನು ಪರೀಕ್ಷೆ ಮುಗಿದ ಕೂಡಲೇ ವಿಳಂಬ ಮಾಡದೇ, **ಶ್ರೀಮತಿ ಎನ್. ಶ್ರೀವಲ್ಲಿ, ಸಹಾಯಕ ನಿರ್ದೇಶಕರು (ಇತರೇ ಪರೀಕ್ಷೆಗಳು). ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3.ಇವರ ವಿಳಾಸಕ್ಕೆ ಕಳುಹಿಸಿ ಕೊಡುವುದು.**

4. <u>ಉತ್ತರ ಪತ್ರಿಕೆಗಳ ರವಾನೆ:–</u>

ಪ್ರತಿ ಗೋಪ್ಯ ಲಕೋಟೆಯಲ್ಲಿ (ಕಾನ್ಫಿಡೆನ್ಸಿಯಲ್ ಕವರ್) 14 ಉತ್ತರ ಪತ್ರಿಕೆಗಳನ್ನು ನೊಂದಣಿ ಸಂಖ್ಯೆಗಳ ಕ್ರಮದಲ್ಲಿ ಹಾಕಿರಿ.ಉತ್ತರ ಪುಸ್ತಕಗಳಲ್ಲಿರುವ ನೊಂದಣಿ ಸಂಖ್ಯೆಗಳನ್ನು ಲಕೋಟೆಯ ಮೇಲಿರುವ ಪಟ್ಟಿಯಲ್ಲಿ ಬರೆದು ಇವೆರಡೂ ಕ್ರಮಬದ್ಧವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.ಜೊತೆಯಲ್ಲಿ ಸಂಬಂಧಿಸಿದ ಎ.ಎಂ.ಎಲ್ ಶೀಟ್‌ಗಳನ್ನು ಕವರಿನಲ್ಲಿ ಹಾಕುವುದು.

ಈ ಉತ್ತರ ಪತ್ರಿಕೆಗಳನ್ನೊಳಗೊಂಡ ಲಕೋಟೆಗಳನ್ನು ಬಟ್ಟೆಯಿಂದ ಮಾಡಿದ ಒಂದೇ ಚೀಲದಲ್ಲಿಟ್ಟು ಮೊಹರು ಮಾಡಬೇಕು. ಅದರಲ್ಲಿ ಪತ್ರಿಕೆಗಳ ಜ್ಞಾಪನ ಪತ್ರ (ಮೆಮೊ ಆಫ್ ಕಂಟೆಂಟ್ಸ್) ವನ್ನು ಇಡಬೇಕು.ಉತ್ತರ ಪುಸ್ತಕಗಳ ಬಂಡಲ್ ನ್ನು 100–00ರೂಗಳ ಮೌಲ್ಯಕ್ಕೆ ರಿಜಿಸ್ಟರ್ಡ್ ಇನ್ಸೂರ್ಡ್ ಪಾರ್ಸಲ್ ಮೂಲಕ (ಸ್ಥಳೀಯವಾಗಿದ್ದಲ್ಲಿ ಮುದ್ದಾಂ ಮೂಲಕ) ರವಾನಿಸಬೇಕು.ಯಾವುದೇ ಬಂಡಲ್‌ನ ತೂಕ 05 ಕೆ.ಜಿ.ಗಳಿಗಿಂತ ಹೆಚ್ಚಾಗುವ ಸಂದರ್ಭಗಳಲ್ಲಿ ಅದನ್ನು ಎರಡು ಬಂಡಲ್ ಮಾಡಿರಿ.ಯಾವುದೇ ಕಟ್ಟಿನ ತೂಕ 05 ಕೆ.ಜಿ.ಗಳಿಗಿಂತ ಹೆಚ್ಚಿಗೆ ಮೀರಬಾರದು. ಮತ್ತು ಪ್ರಥಮ/ದ್ವಿತೀಯ ಡಿ.ಪಿ.ಇಡಿ ಭಾಂಗಿಗಳನ್ನು ಪ್ರತ್ಯೇಕವಾಗಿ ಮಾಡಬೇಕು. ಬಂಡಲ್‌ಗಳನ್ನು ನಿಮ್ಮ ಸಮ್ಮುಖದಲ್ಲಿ ಮೊಹರು ಮಾಡಿರಿ. ಪ್ರತಿ ಬಂಡಲ್ ಮೇಲ್ಭಾಗದ ಬಟ್ಟೆಯ ಮೇಲೆ ಎಡ ಪಾರ್ಶ್ವದಲ್ಲಿ ಸ್ಪಷ್ಟವಾಗಿ ಕಾಣುವಂತೆ ಕೆಳಕಂಡ ವಿವರಗಳನ್ನು ಬರೆಯಬೇಕು.

1. ಪರೀಕ್ಷಾ ಕೇಂದ್ರದ ಸಂಖ್ಯೆ.
2. ಕೇಂದ್ರದ ಹೆಸರು.
3. ಲಕೋಟೆಗಳ ಸಂಖ್ಯೆ.
4. ವಿಷಯ ಮತ್ತು ವಿಷಯದ ಸಂಕೇತ (ನೇಮ್ ಆಫ್ ದಿ ಸಬ್ಜೆಕ್ಟ್ ಅಂಡ್ ಕೋಡ್).
5. ಉತ್ತರ ಪತ್ರಿಕೆಗಳ ಸಂಖ್ಯೆ.
6. ಡಿ.ಪಿ.ಇಡಿ ಹೊಸ ಅಭ್ಯರ್ಥಿಗಳ ಸಂಖ್ಯೆ.

7.ಡಿ.ಪಿ.ಇಡಿ ರಿಪೀಟರ್ಸ್ ಅಭ್ಯರ್ಥಿಗಳ ಸಂಖ್ಯೆ.

ಉತ್ತರ ಪತ್ರಿಕೆಗಳ ರವಾನೆಯ ಜವಾಬ್ದಾರಿಯು ಮುಖ್ಯ ಅಧೀಕ್ಷಕರದ್ದಾಗಿರುತ್ತದೆ.ಉತ್ತರ ಪತ್ರಿಕೆಗಳ ಬಂಡಲುಗಳನ್ನು ಮೌಲ್ಯಮಾಪನ ಕೇಂದ್ರದ ಅಭಿರಕ್ಷಕರ ಈ ಕೆಳಕಂಡ ವಿಳಾಸಕ್ಕೆ ತಡಮಾಡದೇ ಕಳುಹಿಸತಕ್ಕದ್ದು.

**ಶ್ರೀಮತಿ ಎನ್. ಶ್ರೀವಲ್ಲಿ, ಸಹಾಯಕ ನಿರ್ದೇಶಕರು (ಇತರೇ ಪರೀಕ್ಷೆಗಳು).**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003.**

**5. ಮುದ್ರಿತ ಹೆಸರು ಪಟ್ಟಿಯಲ್ಲಿ ಹಾಜರಾತಿ ಗುರುತಿಸುವ ಬಗ್ಗೆ:-**

ಮುದ್ರಿತ ಹೆಸರಿನ ಪಟ್ಟಿಯಲ್ಲಿ ಗೈರು ಹಾಜರಾದವರನ್ನು ಈ ಕೆಳಗೆ ತಿಳಿಸಿರುವಂತೆ ಹೆಸರಿನ ಪಟ್ಟಿಯಲ್ಲಿ ಗುರುತಿಸಿಕೊಳ್ಳಬೇಕು. ಎಲ್ಲಾ ವಿಷಯಗಳಲ್ಲೂ ಒಬ್ಬ ಅಭ್ಯರ್ಥಿಯು ಗೈರು ಹಾಜರಾಗಿದ್ದರೆ, ಅಭ್ಯರ್ಥಿಯ ನೋಂದಣಿ ಸಂಖ್ಯೆಯ ಎದುರಿಗೆ ಇರುವ ಎಲ್ಲಾ ಸೂಚ್ಯಾಂಕಗಳನ್ನು ಕೆಂಪು ಶಾಹಿಯಲ್ಲಿ ಪ್ರತಿಯೊಂದನ್ನು ಸುತ್ತುಗಟ್ಟಿ ಗುರುತಿಸಿ. ಅಭ್ಯರ್ಥಿಗಳ ಪ್ರತಿನಿತ್ಯ ಗೈರುಹಾಜರಿ ಪಟ್ಟಿಯಲ್ಲಿ ನಮೂದಿಸಿರತಕ್ಕ ನೋಂದಣಿ ಸಂಖ್ಯೆಯನ್ನು ಹೆಸರು ಪಟ್ಟಿಯಲ್ಲಿ ಗುರುತಿಸಿರುವ ಗೈರುಹಾಜರಿಯನ್ನು ಪರೀಕ್ಷಿಸಿ ಎರಡೂ ವ್ಯತ್ಯಾಸವಿಲ್ಲದೇ ಇರುವುದನ್ನು ಸ್ಪಷ್ಟಪಡಿಸಿಕೊಳ್ಳಿ. ಪರೀಕ್ಷಾ ಕೇಂದ್ರದ ಅಧೀಕ್ಷಕರು ಹಾಗೂ ಕೊಠಡಿ ಮೇಲ್ವಿಚಾರಕರು ಪ್ರವೇಶ ಪತ್ರದಲ್ಲಿ ಹಾಗೂ ಸಿ.ಎನ್.ಆರ್.ಗಳಲ್ಲಿ ವಿದ್ಯಾರ್ಥಿಯ ಸಹಿ ಇಲ್ಲದಿದ್ದಲ್ಲಿ. ಸಂಬಂಧಿಸಿದ ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ವಿದ್ಯಾರ್ಥಿಯನ್ನು ತಾಳೆ ನೋಡಿ ಅವರ ಸಹಿಯನ್ನು ತಮ್ಮ ಎದುರಿನಲ್ಲಿಯೇ ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರ ದೃಢೀಕರಣದೊಂದಿಗೆ ಪಡೆಯುವುದು ಹಾಗೂ ಸದರಿ ಪ್ರವೇಶ ಪತ್ರದ ಬಲಭಾಗದ ಜಾಗದಲ್ಲಿ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾದ ವಿಷಯ ಹಾಗು ಅವರ ಸಹಿಯನ್ನು ದಿನಾಂಕದೊಂದಿಗೆ ಪಡೆಯುವುದು.ಸಿ.ಎನ್.ಆರ್ ಮತ್ತು ಗೈರು ಹಾಜರಾತಿ ತಃಖ್ತೆಯನ್ನು ಪರೀಕ್ಷೆ ಮುಗಿದ ಮಾರನೇ ದಿನವೇ **ಶ್ರೀಮತಿ ಎನ್. ಶ್ರೀವಲ್ಲಿ, ಸಹಾಯಕ ನಿರ್ದೇಶಕರು (ಇತರೇ ಪರೀಕ್ಷೆಗಳು). ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.ಇವರ ವಿಳಾಸಕ್ಕೆ ಕಳುಹಿಸುವುದು.**ಕೇಂದ್ರ ಪರೀಕ್ಷಾ ಅಧೀಕ್ಷಕರ ಮಸ್ತಕ (ಲಾಗ್ ಬುಕ್) ಕಛೇರಿಗೆ ಕಳುಹಿಸಬಾರದು.ಅದನ್ನು ಕೇಂದ್ರದಲ್ಲಿಯೇ ಕಾಯ್ದಿರಿಸಿಕೊಂಡು ಮತ್ತು ತನಿಖಾಧಿಕಾರಿಗಳು ಕೇಳಿದಾಗ ತೋರಿಸಬೇಕಾಗುತ್ತದೆ.

**6. ಲೇಖನ ಸಾಮಗ್ರಿಯ ಲೆಕ್ಕ:-**

ಲೇಖನ ಸಾಮಗ್ರಿಯ ಲೆಕ್ಕ (ಸ್ಟೇಷನರಿ ಅಕೌಂಟ್ಸ್) ವನ್ನು ಪ್ರತ್ಯೇಕ ಲಕೋಟೆಯಲ್ಲಿ ಪರೀಕ್ಷೆ ಮುಗಿದ 3 (ಮೂರು) ದಿನಗಳೊಳಗಾಗಿ ಶ್ರೀಮತಿ ಎನ್. ಶ್ರೀವಲ್ಲಿ, ಸಹಾಯಕ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರ ಸ್ವಂತ ವಿಳಾಸಕ್ಕೆ ಕಳುಹಿಸಬೇಕು.

**7. ಪರೀಕ್ಷೆಗೆ ಅನ್ವಯಿಸುವ ಸಿಬ್ಬಂದಿ ವಿವರ:-**

1. ಪ್ರತಿ ಕೊಠಡಿಗೆ ಒಬ್ಬ ಮೇಲ್ವಿಚಾರಕರು (ಸೂಪರ್‌ವೈಸರ್) ಪ್ರತಿ 25 ಅಭ್ಯರ್ಥಿಗಳಿಗೆ ಅಥವಾ ಸಂಖ್ಯೆಗೆ ಒಬ್ಬರಂತೆ ಇದಕ್ಕಾಗಿ 25 ಅಥವಾ ಹೆಚ್ಚು ಅಭ್ಯರ್ಥಿಗಳಿಗೆ ಅವಕಾಶವಿರುವ ಎಲ್ಲಾ ಕೊಠಡಿಗಳನ್ನು ಉಪಯೋಗಿಸತಕ್ಕದ್ದು. ಹೀಗೆ

ಮಾಡಿದ ನಂತರ ಅದಕ್ಕಿಂತ ಚಿಕ್ಕ ಕೊಠಡಿಯನ್ನು ಉಪಯೋಗಿಸತಕ್ಕದ್ದು. ಸಂಭಾವನೆ ಬಿಲ್ಲಿಗೆ ಅಭ್ಯರ್ಥಿಗಳ ಪೀಠ ವ್ಯವಸ್ಥೆಯ (ಸೀಟಿಂಗ್ ಅರೇಂಜ್‌ಮೆಂಟ್ಸ್) ನಕ್ಷೆಯನ್ನು ಲಗತ್ತಿಸಿ.

10(ಹತ್ತು) ಮೇಲ್ವಿಚಾರಕರಿಗೆ (ಮತ್ತು ಉಳಿಕೆ ಅಂಶಕ್ಕೆ) ಬಿಡವು ಮೇಲ್ವಿಚಾರಕ (ರಿಲೀವಿಂಗ್ ಸೂಪರ್‌ವೈಸರ್) ರನ್ನು ನೇಮಿಸಬಹುದು ಒಟ್ಟು ಸಂಭಾವನೆ ಬಿಲ್ಲನ್ನು (ಕನ್ಸಾಲಿಡೇಟೆಡ್ ರೆಮ್ಯೂನರೇಷನ್ ಬಿಲ್) ತಯಾರಿಸಿ ಅದರಲ್ಲಿ ನೀರು ಕೊಡುವ ವ್ಯಕ್ತಿಯ ಅಥವಾ ಜವಾನರ ಸಂಭಾವನೆ ಸೇರಿಸಿ ನಿಯಮಿತ ನಮೂನೆಯಲ್ಲಿ ದ್ವಿ ಪ್ರತಿಯಲ್ಲಿ ತಯಾರಿಸಿ ಡಿ.ಸಿ. ಬಿಲ್ಲು ಮತ್ತು ರಸೀತಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ **ಲೆಕ್ಕಾಧಿಕಾರಿಗಳು, ಲೆಕ್ಕ ಪತ್ರ ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003** ಇವರ ಸ್ವಂತ ವಿಳಾಸಕ್ಕೆ ಕಳುಹಿಸುವುದು.

2. **ಸದರಿ ಪರೀಕ್ಷೆಗೆ ದೈಹಿಕ ಶಿಕ್ಷಣ ಶಿಕ್ಷಕರನ್ನಾಗಲಿ/ಉಪನ್ಯಾಸಕರನ್ನಾಗಲಿ ಅಥವಾ ದೈಹಿಕ ಶಿಕ್ಷಣ ಅಭ್ಯಾಸ ಮಾಡಿರುವ ಬೇರೆ ಸಹ ಶಿಕ್ಷಕರನ್ನಾಗಲಿ ಯಾವುದೇ ಕಾರಣಕ್ಕೂ ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿಕೊಳ್ಳಬಾರದು.**

8. **ಸಾದಿಲ್ವಾರು ಖರ್ಚು (ಕಾಂಟಿಜೆನ್ಸಿ):–**

ಮುಖ್ಯ ಅಧೀಕ್ಷಕರುಗಳು ಅನೇಕ ಸಂದರ್ಭಗಳಲ್ಲಿ ಸಾದಿಲ್ವಾರು ಎನಿಸಿಕೊಳ್ಳದಿರುವ ವಸ್ತುಗಳಿಗೆಲ್ಲಾ ಹಣ ಖರ್ಚು ಮಾಡಿರುವುದು ಗಮನಕ್ಕೆ ಬಂದಿದೆ.ಪರೀಕ್ಷೆ ನಡೆಸಲು ಅಗತ್ಯವಾದ ಸಾದಿಲ್ವಾರು ಪದಾರ್ಥಗಳ ಪಟ್ಟಿಯನ್ನು ಈಗಾಗಲೇ ತಿಳಿಸಲಾಗಿದೆ ಮತ್ತು ಅವುಗಳಲ್ಲಿ ಪರೀಕ್ಷೆ ನಡೆಸಲು ಅತ್ಯಗತ್ಯವಾದ ಮತ್ತು ಬೇಕಾಗುವಷ್ಟು ಮಾತ್ರ ಕೊಳ್ಳಲು ಸೂಚಿಸಲಾಗಿದೆ.ಅನಾವಶ್ಯಕವೆಂದು ಕಂಡು ಬರುವ ಖರ್ಚುಗಳನ್ನು ಯಾವುದೇ ಕಾರಣದಿಂದಾಗಲೀ ಭರಿಸಲಾಗುವುದಿಲ್ಲ. ಮತ್ತು ಬಿಲ್ಲಿನಲ್ಲಿ ಅಂತಹ ಮೊಬಲಗನ್ನು ಕಡಿತಗೊಳಿಸಲಾಗುವುದು. ಸಾದಿಲ್ವಾರು ಖರ್ಚು ಬಾಬ್ತಿನ ಮುಖ್ಯ ಅಂಶಗಳೆಂದರೆ:–

1) ಉತ್ತರ ಪುಸ್ತಕಗಳನ್ನು ಕಳುಹಿಸಲು ಆಗುವ ಇನ್‌ಷೂರ್ಡ್ ಅಂಚೆ ವೆಚ್ಚ

2) ಉತ್ತರ ಪತ್ರಿಕೆ ಬಂಡಲ್ ಕಟ್ಟಲು ಪ್ರತಿ ಚೀಲಕ್ಕೆ ಅರ್ಧ ಮೀಟರಿನಂತೆ ಸರ್ಕಾರದಿಂದ ಗೊತ್ತು ಪಡಿಸಿರುವ ಕಂಟ್ರೋಲ್ಡ್ ಕ್ಲಾತ್‌ಗಳನ್ನು ಮಾತ್ರ ಕೊಳ್ಳಬೇಕು

3) ಅವಶ್ಯಕವಾಗುವಷ್ಟು ವ್ಯಾಕ್ಸ್, ಮೇಣದ ಬತ್ತಿ.

4) ಗೋಂದು (ಹೆಚ್ಚು ಬೆಲೆಯ ಸೀಸೆಯಲ್ಲಿನ ಗೋಂದಿನ ಖರ್ಚನ್ನು ಕೊಡಲಾಗುವುದಿಲ್ಲ.) ಮೈದಾ ಹಿಟ್ಟಿನಿಂದ ಗೋಂದು ತಯಾರುಮಾಡಿ ಉಪಯೋಗಿಸಬಹುದು.

**9. ಪರೀಕ್ಷಾ ಕಾರ್ಯಕ್ಕೆ ನೇಮಿಸಲ್ಪಟ್ಟವರಿಗೆ ಈ ಕೆಳಗಿನಂತೆ ಸಂಭಾವನೆಯನ್ನು ನೀಡಲಾಗುತ್ತದೆ.**

1) ಮುಖ್ಯ ಅಧೀಕ್ಷಕರಿಗೆ – ರೂ.75–00 ಒಂದು ಅವಧಿಗೆ.

2) ಕೊಠಡಿ ಮೇಲ್ವಿಚಾರಕರಿಗೆ – ರೂ.50–00 ಒಂದು ಅವಧಿಗೆ.

3) ಸಹಾಯಕರು – ರೂ.45–00 ಒಂದು ಅವಧಿಗೆ.

4) ಡಿ ದರ್ಜೆ ಸಿಬ್ಬಂದಿ – ರೂ 35–00 ಒಂದು ಅವಧಿಗೆ.

**ದಿನಭತ್ಯೆ/ಸ್ಥಳೀಯ ಭತ್ಯೆ:**

| ಕ್ರ ಸಂ | ಭತ್ಯೆಗಳ ವಿವರ | ರೂ ಗಳಲ್ಲಿ |
|---|---|---|
| 01 | ಬೆಂಗಳೂರು, ನಗರದಲ್ಲಿ ದಿನಭತ್ಯೆ | 300–00 |
| 02 | ಬೆಂಗಳೂರು, ನಗರದಲ್ಲಿ ಸ್ಥಳೀಯ ಭತ್ಯೆ | 150–00 |
| 03 | ಬೆಂಗಳೂರು ನಗರವನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ದಿನಭತ್ಯೆ | 250–00 |
| 04 | ಬೆಂಗಳೂರು ನಗರವನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ಸ್ಥಳೀಯ ಭತ್ಯೆ | 100–00 |

**ಮಂಡಳಿಯಿಂದ ಬಿಡುಗಡೆಯಾದ ಹಣ ಉಳಿದಲ್ಲಿ,ಉಳಿಕೆ ಹಣವನ್ನು ಮಂಡಳಿಯಿಂದ ಕಳುಹಿಸಿರುವ NEFT ಚಲನ್ ಮೂಲಕ ಯಾವುದಾದರು** ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹಣ ಸಂದಾಯ ಮಾಡಿ ಮೂಲ ಚಲನ್‌ನ್ನು ಮಂಡಳಿಗೆ ಕಳುಹಿಸುವುದು. ಒಂದು ಜೆರಾಕ್ಸ್ ಪ್ರತಿಯನ್ನು ನಿಮ್ಮಲ್ಲಿಯೇ ಉಳಿಸಿಕೊಳ್ಳುವುದು.

**ಇತರೆ:–**

1. ಈ ಸುತ್ತೋಲೆಯನ್ನು ಕೇಂದ್ರದ ಶಾಲೆಯ ಮುಖ್ಯೋಪಾಧ್ಯಾಯರ ವಶಕ್ಕೆ ಪರೀಕ್ಷೆ ಮುಗಿದ ನಂತರ ಕೊಡತಕ್ಕದ್ದು. ಮುಂದಿನ ಪರೀಕ್ಷೆಗೂ ಇದು ಅನ್ವಯಿಸುವ ಸಾಧ್ಯತೆ ಇರುವುದರಿಂದ ಈ ತಿಳುವಳಿಕೆ ಸುತ್ತೋಲೆಯನ್ನು ಪ್ರತಿ ಕೇಂದ್ರದಲ್ಲೂ ಮುಂದಿನ ಅಧೀಕ್ಷಕರ ಉಪಯೋಗಕ್ಕೆ ಸಿಗುವಂತೆ ಇಡತಕ್ಕದ್ದು. ಹೆಸರಿನ ಪಟ್ಟಿಯಲ್ಲಿ ತಿರಸ್ಕರಿಸಿದೆ ಎಂದು ನಮೂದಿಸಿರುವ ಅಭ್ಯರ್ಥಿಗಳನ್ನು ಯಾವುದೇ ಕಾರಣದಿಂದಲೂ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಬಾರದು.
2. ಅತಿ ಜರೂರು ಸಂದರ್ಭಗಳಲ್ಲಿ ಮಂಡಳಿಯ ಅಧಿಕಾರಿಗಳನ್ನು ಈ ಕೆಳಕಂಡ ದೂರವಾಣಿ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.

| | |
|---|---|
| **ನಿರ್ದೇಶಕರು (ಇತರೆ ಪರೀಕ್ಷೆಗಳು)** | **ಕಛೇರಿ – 23360108/23349434** |
| **ಕಾರ್ಯದರ್ಶಿಗಳು** | **ಕಛೇರಿ – 23445579** |
| **ಸಹಾಯಕ ನಿರ್ದೇಶಕರು** | **ಕಛೇರಿ – 23360109** |

ಸಹಿ/–

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಇವರಿಗೆ:–**1) ಎಲ್ಲಾ ಡಿ.ಪಿ.ಇಡಿ. ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳ ಮಾಹಿತಿಗಾಗಿ.2) ಕಛೇರಿ ಪ್ರತಿ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–3

ಸಂಖ್ಯೆ: /ಡಬ್ಲ್ಯೂ1/ಫ.ಪ್ರ/16/2015–16 ದಿನಾಂಕ: 04.08.2015

*** ಸುತ್ತೋಲೆ ***

ವಿಷಯ: ಜೂನ್–2015ರ ಮಾಹೆಯಲ್ಲಿ ನಡೆದ ಪ್ರಥಮ, ದ್ವಿತೀಯ

ಡಿ.ಪಿ.ಇಡಿ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಬಗ್ಗೆ.

ಜೂನ್–2015ರ ಮಾಹೆಯಲ್ಲಿ ನಡೆದ ಡಿ.ಪಿ.ಇಡಿ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಈ ಪತ್ರದೊಂದಿಗೆ ಅನುಬಂಧಿಸಿ ಕಳುಹಿಸಲಾಗಿದೆ. ದಿನಾಂಕ: 10.08.2015 ರಂದು ಬೆಳಿಗ್ಗೆ 11.00 ಘಂಟೆಗೆ ನಿಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು.ಫಲಿತಾಂಶ ಪ್ರಕಟಿಸುವಾಗ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಗಮನಿಸಿ ಪಾಲಿಸಲು ತಿಳಿಸಿದೆ. ಪ್ರಕಟಿತ ಪರೀಕ್ಷಾ ಫಲಿತಾಂಶದ ಉದ್ಧೃತ ಭಾಗದ ದಾಖಲೆ, ವಿಷಯವಾರು ಅಂಕಗಳು ಮತ್ತು ಜನ್ಮ ದಿನಾಂಕ ಇತ್ಯಾದಿಗಳ ಉದ್ಧೃತ ಭಾಗವನ್ನು ಯಾವುದೇ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರು ವಿದ್ಯಾರ್ಥಿಗೆ ನೀಡತಕ್ಕದ್ದಲ್ಲ. ಅಂತಹ ದಾಖಲೆಗಳನ್ನು ನೀಡಲು ಮಂಡಳಿಗೆ ಮಾತ್ರ ಅಧಿಕಾರವಿದೆ. ಆದರೆ ವಿದ್ಯಾರ್ಥಿಗಳು ಪಡೆದ ವಿಷಯವಾರು ಅಂಕಗಳನ್ನು ಫಲಿತಾಂಶದೊಂದಿಗೆ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು.ಫಲಿತಾಂಶ ಪ್ರಕಟಣೆಯಾದ ದಿನಾಂಕದಿಂದ 30 ದಿವಸದೊಳಗೆ ಫಲಿತಾಂಶ ತಿದ್ದುಪಡಿ ಇದ್ದಲ್ಲಿ ಮಾಡಲಾಗುವುದು.ಅದಕ್ಕಾಗಿ ಕೂಡಲೇ ಅರ್ಜಿ ಸಲ್ಲಿಸತಕ್ಕದ್ದು.ತದನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಫಲಿತಾಂಶದಲ್ಲಿ ಏನಾದರು ತಪ್ಪಾಗಿ ನಮೂದಿತವಾಗಿದ್ದಲ್ಲಿ ಅಂತಹ ಫಲಿತಾಂಶಗಳನ್ನು ಮರು–ಪರಿಶೀಲಿಸಿ ಮಂಡಳಿಯ ನಿಯಮಾನುಸಾರ ತಿದ್ದುಪಡಿ ಮಾಡುವ ಅಧಿಕಾರವನ್ನು ಮಂಡಳಿಯು ಹೊಂದಿರುತ್ತದೆ.The Mysore Secondary Education Board Act 1996 Publication of result ನಿಯಮ–20ರ ಪ್ರಕಾರ ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ, ವಂಚನೆ, ಅನುಚಿತ ವರ್ತನೆ ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಪರೀಕ್ಷಾ ಫಲಿತಾಂಶ ಪ್ರಕಟವಾದ 60 ದಿನಗಳ ನಂತರವೂ ತಿದ್ದುಪಡಿ ಮಾಡುವ ಅಧಿಕಾರವನ್ನು ಪರೀಕ್ಷಾ ಮಂಡಳಿ ಹೊಂದಿರುತ್ತದೆ.

**ವಿಶೇಷ ಸೂಚನೆ:– ಈ ಕೆಳಕಂಡ ಅಂಶಗಳ ಬಗ್ಗೆ ಆದ್ಯ ಗಮನ ಹರಿಸುವುದು.**

1. ವಿಷಯ ಸಂಕೇತ, ಮಾಧ್ಯಮ ಬದಲಾವಣೆಯಾಗಿದ್ದಲ್ಲಿ ತಕ್ಷಣವೇ ಪ್ರವೇಶ ಪತ್ರ ನಾಮಿನಲ್ ರೋಲ್‌ನ್ ಛಾಯಾಪ್ರತಿ ದೃಢೀಕರಿಸಿ ಸಲ್ಲಿಸುವುದು. 30 ದಿನಗಳೊಳಗೆ ವಿಷಯ ಸಂಕೇತ ಬದಲಾವಣೆಗೆ ಸಲ್ಲಿಸದೇ ನಂತರ ಸಲ್ಲಿಸುವ ಯಾವುದೇ ಮನವಿಗಳನ್ನು ಮಂಡಳಿ ಪರಿಗಣಿಸುವುದಿಲ್ಲ.
2. ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ ಅದಲು–ಬದಲಾಗಿದ್ದಲ್ಲಿ ತಕ್ಷಣವೇ ಪ್ರಸ್ತಾವನೆ ಸಲ್ಲಿಸುವುದು. ಒಮ್ಮೆ ಅಂಕಪಟ್ಟಿ ಮುದ್ರಿಸಿದ ನಂತರ ಭಾವಚಿತ್ರ ಬದಲಾವಣೆಗೆ ಅವಕಾಶವಿಲ್ಲ. (ಸಂಸ್ಥೆಯ ದಾಖಲಾತಿ ವಹಿಯ ಸಂಬಂಧಿಸಿದ ಪುಟಗಳನ್ನು ದೃಢೀಕರಿಸಿ ಕಳುಹಿಸುವುದು).
3. ಭಾವಚಿತ್ರ ಪ್ರವೇಶ ಪತ್ರದಲ್ಲಿ ಇಲ್ಲದೇ ಇರುವಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಭಾವಚಿತ್ರವನ್ನು ಕಳುಹಿಸುವುದು.ಇಲ್ಲವಾದಲ್ಲಿ ಅಂಕಪಟ್ಟಿ ನೀಡಲಾಗುವುದಿಲ್ಲ, ಹಾಗೂ ನಿಗದಿತ ಸಮಯದಲ್ಲಿ ಭಾವಚಿತ್ರ ಕಳುಹಿಸದೇ ಇರುವಂತಹ ಪ್ರಕರಣಗಳಿಗೆ ನಿಯಮಾನು ರೀತ್ಯಾ ಶಿಸ್ತು ಕ್ರಮ ಕೈಗೊಳ್ಳುವುದರ ಜೊತೆಗೆ ಒಂದು ಪ್ರಕರಣಕ್ಕೆ ರೂ100/– ದಂಡ ವಿಧಿಸಲಾಗುವುದು.

4. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು ಇತ್ಯಾದಿಗಳಲ್ಲಿ Spelling ದೋಷವಿದ್ದಲ್ಲಿ ಫಲಿತಾಂಶ ಪಟ್ಟಿಯ ಛಾಯಾ ಪ್ರತಿಯಲ್ಲಿ ದಪ್ಪಕ್ಷರಗಳಲ್ಲಿ ಕೆಂಪು ಶಾಯಿಯಲ್ಲಿ ತಿದ್ದುಪಡಿ ಮಾಡಿ ಪ್ರಸ್ತಾವನೆ ಸಲ್ಲಿಸುವುದು.
5. ಪ್ರಥಮ ವರ್ಷದ ಫಲಿತಾಂಶ ಪಟ್ಟಿಯಲ್ಲಿ ಫಲಿತಾಂಶವನ್ನು PASS ಮತ್ತು FAIL ಎಂದು, ದ್ವಿತೀಯ ವರ್ಷದ ಫಲಿತಾಂಶ ಪಟ್ಟಿಯಲ್ಲಿ ಪ್ರಥಮ ವರ್ಷದ ಒಟ್ಟು ಅಂಕಗಳನ್ನು ಹಾಗೂ ಉತ್ತೀರ್ಣರಾದ ದರ್ಜೆಯನ್ನು ನಮೂದಿಸಿದೆ.ದ್ವಿತೀಯ ಡಿ.ಪಿ.ಇಡಿ ಫಲಿತಾಂಶ ಪಟ್ಟಿಯಲ್ಲಿ ಪ್ರಥಮ ಡಿ.ಪಿ.ಇಡಿಯಲ್ಲಿ ಅನುತ್ತೀರ್ಣರಾಗಿದ್ದಲ್ಲಿ FNC ಎಂದು ಫಲಿತಾಂಶ ಪ್ರಕಟಿಸಲಾಗಿದೆ. ಒಂದು ವೇಳೆ ಪ್ರಥಮ ಡಿ.ಪಿ.ಇಡಿಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಥಮ ಡಿ.ಪಿ.ಇಡಿ ಫಲಿತಾಂಶ ಪಟ್ಟಿ ಅಥವಾ ಅಂಕಪಟ್ಟಿ ದೃಢೀಕರಿಸಿ 30 ದಿನಗಳೊಳಗೆ ಪ್ರಸ್ತಾವನೆ ಸಲ್ಲಿಸುವುದು. ನಂತರ ಸಲ್ಲಿಸುವ ಪ್ರತಿಯೊಂದು ಪ್ರಕರಣಕ್ಕೆ ಸಂಸ್ಥೆಗೆ ರೂ.1000/– ದಂಡ ವಿಧಿಸಲಾಗುವುದು.
6. ಅಲ್ಲದೇ ದ್ವಿತೀಯ ಡಿ.ಪಿ.ಇಡಿಯಲ್ಲಿ ಜೂನ್–2015ಕ್ಕಿಂತ ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿದ್ದು ಪ್ರಥಮ ಡಿ.ಪಿ.ಇಡಿ ಜೂನ್–2015ರಲ್ಲಿ ಉತ್ತೀರ್ಣರಾಗಿರುವ ಪ್ರಕರಣಗಳಲ್ಲಿ ಅಂತಹ ಎಲ್ಲಾ FNC ಪ್ರಕರಣಗಳನ್ನು ಪೂರಕ ದಾಖಲೆಗಳೊಂದಿಗೆ ದೃಢೀಕರಿಸಿ ದ್ವಿತೀಯ ಡಿ.ಪಿ.ಇಡಿ, ಪರಿಷ್ಕೃತ ಫಲಿತಾಂಶ ಪ್ರಕಟಿಸುವಂತೆ 30 ದಿನಗಳೊಳಗೆ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು.ಇಲ್ಲವಾದಲ್ಲಿ ಅಂತಹ ಪ್ರಕರಣಗಳಿಗೂ ಸಹ ಸಂಸ್ಥೆಗೆ ರೂ.1000/– ದಂಡ ವಿಧಿಸಲಾಗುವುದು.

ಜೂನ್–2015ರ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣ/ಅನುತ್ತೀರ್ಣ ಅಭ್ಯರ್ಥಿಗಳು ಮರು ಎಣಿಕೆ ಅಥವಾ ಉತ್ತರ ಪತ್ರಿಕೆ ಜೆರಾಕ್ಸ್ ಪ್ರತಿ ಬಯಸಿದ್ದಲ್ಲಿ ನಿಗದಿತ ನಮೂನೆಯಲ್ಲಿ ವಿವರಗಳನ್ನು **ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕವನ್ನು ಮಂಡಳಿಯಿಂದ ಕಳುಹಿಸಿರುವ NEFT CHALLANಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹಣ ಸಂದಾಯ ಮಾಡಿ ಮೂಲ ಚಲನ್‌ನ್ನು ಅರ್ಜಿಯ ಜೊತೆಯಲ್ಲಿ ಮಂಡಳಿಗೆ ಕಳುಹಿಸುವುದು**. ಒಂದು ಜೆರಾಕ್ಸ್ ಪ್ರತಿಯನ್ನು ನಿಮ್ಮಲ್ಲಿಯೇ ಉಳಿಸಿಕೊಳ್ಳುವುದು.ಸಂಬಂಧಪಟ್ಟ ಅರ್ಜಿಯ ನಮೂನೆಗಳನ್ನು ಇದರೊಂದಿಗೆ ಕಳುಹಿಸಿದೆ. ಅರ್ಜಿಯನ್ನು ಫಲಿತಾಂಶ ಪ್ರಕಟಣೆಗೊಂಡ ದಿನಾಂಕದಿಂದ **15 (ಹದಿನೈದು)ದಿನಗಳೊಳಗೆ** ಮಂಡಳಿಗೆ ತಲುಪುವಂತೆ ಸಲ್ಲಿಸತಕ್ಕದ್ದು, ನಿಗದಿತ ದಿನಾಂಕ ಮೀರಿ ಬಂದ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.

ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ ಪಡೆದವರು ಮಾತ್ರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಜೆರಾಕ್ಸ್ ಪ್ರತಿ ತಲುಪಿದ ಏಳು ದಿನದೊಳಗೆ ಮರು ಮೌಲ್ಯಮಾಪನಕ್ಕೆ ನಿಗದಿತ ಶುಲ್ಕದೊಂದಿಗೆ ಸಲ್ಲಿಸಲು ತಿಳಿಸಿದೆ.(ಜೆರಾಕ್ಸ್ ಪ್ರತಿ ತಲುಪಿದ ಟಪಾಲಿನ ಲಕೋಟೆ ಭದ್ರಪಡಿಸಿ ಕೊಳ್ಳುವುದು)ಅಭ್ಯರ್ಥಿಗಳು ಮರು ಎಣಿಕೆ ಅಥವಾ ಛಾಯಾ ಪ್ರತಿ ಎರಡರಲ್ಲಿ ಒಂದಕ್ಕೆ ಮಾತ್ರ ಅರ್ಜಿ ಸಲ್ಲಿಸುವುದು. ಉತ್ತರ ಪತ್ರಿಕೆಯ ಛಾಯಾ ಪ್ರತಿಗಾಗಿ ನಿಗದಿತ ಶುಲ್ಕ ಪಾವತಿಸದೇ ನೇರ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕರಣಗಳನ್ನು ತಿರಸ್ಕರಿಸಲಾಗುವುದು.ನೇರ ಮರು ಮೌಲ್ಯಮಾಪನಕ್ಕೆ ಶುಲ್ಕ ಪಾವತಿಸಿರುವುದನ್ನು ಮಂಡಳಿಯು ಮುಟ್ಟುಗೋಲು ಹಾಕಿಕೊಳ್ಳುವುದು.

**ಮರು ಎಣಿಕೆ ಶುಲ್ಕ ಪ್ರತಿಯೊಂದು ವಿಷಯಕ್ಕೆ ರೂ.150–00**

**ಉತ್ತರ ಪತ್ರಿಕೆ ಜೆರಾಕ್ಸ್ ಪ್ರತಿ ಪಡೆಯಲು ಒಂದು ಪತ್ರಿಕೆಗೆ ರೂ.300–00**

**ಮರು ಮೌಲ್ಯಮಾಪನಕ್ಕೆ ಸಲ್ಲಿಸಲು ಒಂದು ವಿಷಯಕ್ಕೆ ರೂ.700–00**

ಹೆಚ್ಚಿನ ವಿವರಗಳಿಗೆ ಮಂಡಳಿಯಿಂದ ಕಳುಹಿಸಿರುವ ಅರ್ಜಿಗಳ ಹಿಂಭಾಗದಲ್ಲಿ ನಮೂದಿಸಿರುವ ಸೂಚನೆಗಳನ್ನು ಓದತಕ್ಕದ್ದು.

ಅರ್ಜಿ ಸಲ್ಲಿಸಬೇಕಾದ ವಿಳಾಸ:– **ಸಹಾಯಕ ನಿರ್ದೇಶಕರು, ಡಿ.ಪಿ.ಇಡಿ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ,ಮಲ್ಲೇಶ್ವರಂ, ಬೆಂಗಳೂರು–560003**.

ಮರು ಎಣಿಕೆ ಮತ್ತು ಮರು ಮೌಲ್ಯಮಾಪನ ಅಂಕಗಳು ಬದಲಾವಣೆಯಾದಲ್ಲಿ ಮಂಡಳಿಯ ನಿಯಮಾನುಸಾರ ಪರಿಷ್ಕೃತ ಫಲಿತಾಂಶ ಪ್ರಕಟಿಸಲಾಗುವುದು.ಅರ್ಜಿಯೊಂದಿಗೆ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.

ನ್ಯಾಯಾಲಯ ಪ್ರಕರಣ, ಇತರೆ ಕಾರಣಗಳು, ಗಣಕೀಕರಣ ದೋಷದಿಂದ ತಡೆಹಿಡಿದ ಫಲಿತಾಂಶಗಳಿಗೆ W ಎಂದು, ನಕಲು ವ್ಯವಹಾರದಲ್ಲಿ ತೊಡಗಿದ ಅಭ್ಯರ್ಥಿಗಳ ಫಲಿತಾಂಶಕ್ಕೆ M ಎಂದು ದಾಖಲಿಸಲಾಗಿದೆ.

ಮೇಲಿನ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷಾ ಫಲಿತಾಂಶವನ್ನು ಸಕಾಲದಲ್ಲಿ ನಿಮ್ಮ ಸಂಸ್ಥೆಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.ಈ ಜ್ಞಾಪನದ ಜೆರಾಕ್ಸ್ ಪ್ರತಿಯನ್ನು ಫಲಿತಾಂಶ ಪಟ್ಟಿಯೊಂದಿಗೆ ಪ್ರಕಟಿಸತಕ್ಕದ್ದು.

**ವಿಶೇಷ ಸೂಚನೆ:–**

ಅಭ್ಯರ್ಥಿಯ ಹೆಸರು, ತಂದೆಯ ಹೆಸರು ದೋಷವಿದ್ದಲ್ಲಿ, ಮಾಧ್ಯಮ ಬದಲಾವಣೆ, ವಿಷಯ ಸಂಕೇತ ಬದಲಾವಣೆ, ದ್ವಿತೀಯ ಡಿ.ಪಿ.ಇಡಿ ಅಂಕಪಟ್ಟಿಯಲ್ಲಿ ಪ್ರಥಮ ಡಿ.ಪಿ.ಇಡಿ ಅಂಕಗಳು ತಪ್ಪಾಗಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಫಲಿತಾಂಶ ಪಟ್ಟಿಯ ಛಾಯಾಪ್ರತಿಯಲ್ಲಿ ಕೆಂಪು ಶಾಯಿಯಲ್ಲಿ ತಿದ್ದುಪಡಿ ಮಾಡಿ ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಮೊಹರಿನೊಂದಿಗೆ ತಪ್ಪದೇ 15 ದಿನದೊಳಗೆ ಕಳುಹಿಸುವುದು. ಯಾವುದೇ ತಪ್ಪುಗಳು ಇಲ್ಲದೇ ಇದ್ದಲ್ಲಿ ಅಂತಹ ಸಂಸ್ಥೆಯವರು ಶೂನ್ಯ ವರದಿ ಕಳುಹಿಸುವುದು.ಅವಧಿ ಮೀರಿದ ನಂತರ ತಿದ್ದುಪಡಿಗೆ ಕಳುಹಿಸಿದಲ್ಲಿ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಫಲಿತಾಂಶವನ್ನು ಮಂಡಳಿಯ ವೆಬ್ ಸೈಟ್ www.kseeb.kar.nic.inನಲ್ಲಿ ಪಡೆಯಬಹುದಾಗಿದೆ.ಈ ಬಗ್ಗೆ ನಿಮ್ಮ ಕಾಲೇಜಿನ ಸೂಚನಾ ಫಲಕದಲ್ಲಿ ಮಾಹಿತಿ ನೀಡಲು ತಿಳಿಸಿದೆ.

ಸಹಿ/–

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಇವರಿಗೆ,**

1.ರಾಜ್ಯದ ಎಲ್ಲಾ ಡಿ.ಪಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ

**ಪ್ರತಿಯನ್ನು:**

1. ಗೌರವಗಳೊಂದಿಗೆ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ.
3. ಕಛೇರಿ ಪ್ರತಿ